ರೇಷನ್‌ರವರು ತಮ್ಮ ಇತಿಯಿಂದ ಹಣವನ್ನು ಕೊಡಬೇಕಾಗುತ್ತದೆ. ಅವರ ಪಾಲಿನ ಹಣವನ್ನು ಮುಂದೆ ಬಂದು ಬೇಗ ಕೊಟ್ಟರೆ ಈ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಕೊಳವೆ ಬಾವಿಗಳನ್ನಾದರೂ ಮಾಡಿಸಿಕೊಡಿ ಎಂದು ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಕೊಳವೆ ಬಾವಿ ಆಗತ್ಯವೋ ಅಲ್ಲೆಲ್ಲಾ ಕೊಳವೆ ಬಾವಿಗಳನ್ನು ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಡಿಸ್ಟ್ರಿಬ್ಯೂಷನ್‌ನಲ್ಲಿ ಏನಾಗಿದೆ ಎಂದರೆ, ಎತ್ತರವಾದ ಜಾಗಕ್ಕೆ ನೀರು ಹೋಗುವುದಿಲ್ಲ. ಇದಕ್ಕೆ ಪೈಪುಗಳು ಬಹಳ ಹಳೆಯದಾಗಿರುವುದೂ ಕೂಡ ಒಂದು ಕಾರಣವಾಗಿದೆ. ಅವುಗಳನ್ನು ಅನೇಕ ವರ್ಷಗಳಿಂದ ದುರಸ್ತಿ ಮಾಡಲಿಲ್ಲ, ಅಲ್ಲಿ ನೀರಿನ ಅಭಾವ ಇದ್ದರೂ ಇರಬಹುದು. ಅದನ್ನು ಸರಿಪಡಿಸುವುದಕ್ಕೆ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈ ನೀರನ್ನು ಡಿಸ್ಟ್ರಿಬ್ಯೂಷನ್ ಮಾಡತಕ್ಕಂತಹ ಜವಾಬ್ದಾರಿ ಕಾರ್ಪೋರೇಷನ್‌ಗೆ ಸಂಬಂಧಪಟ್ಟಿದೆ. ಮಾನ್ಯ ಸದಸ್ಯರು ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಅವರು ಕಾರ್ಪೋರೇಷನ್ ಮೇಲೆ ತಮ್ಮ ಪ್ರಭಾವವನ್ನು ಬೀರಿ ನೀರಿನ ಸರಬರಾಜನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲೂ ಕೂಡ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶಿಖರ ನೇಮದ ಪ್ರಕಾರ ಮಾನ್ಯ ಸದಸ್ಯರಾದ ಶ್ರೀ ಜಿ. ಎಂ. ಕಾನಡೆ ಯವರು ವಿಷಯವನ್ನು ಪ್ರಸ್ತಾಪ ಮಾಡಬಹುದು.

೩) ಸಿರಸಿ ಪುರಸಭೆಗೆ ಸೇರಿದ ನೆಹರು ನಗರ ವಾಸವ ನಂ. ೧೭೧ ರಲ್ಲಿ ಮನೆ ಕಟ್ಟಿಕೊಂಡಿರುವ ದುರ್ಬಲವರ್ಗದವರನ್ನು ಒಕ್ಕಲೆಬ್ಬಿಸುವ ಬಗ್ಗೆ.

ಶ್ರೀ ಜಿ. ಎಂ. ಕಾನಡೆ.—ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆ. ಸಿರಸಿ ತಾಲ್ಲೂಕು ಪುರಸಭೆಯ ಸಂಹದ್ದಿಗೆ ಸೇರಿದ ಸ ನಂ ೧೭೧. ರಲ್ಲಿ ನೆಹರು ನಗರದಲ್ಲಿ ಸುಮಾರು ೨೫ ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಾಗಿರುವ ಬಡ, ದುರ್ಬಲ ವರ್ಗದ ಜನರು ಸುಮಾರು ೨೫೦ ಕ್ಕೂ ಹೆಚ್ಚು ಮನೆಗಳು ಇದ್ದು ಇದನ್ನು ಸಿರಸಿ ಪುರಸಭೆ ಅಧಿಕಾರಿಗಳು ಬಲತ್ಕಾರವಾಗಿ ಕಿತ್ತು ಹಾಕುವ ನೋಟೀಸು ಕೊಟ್ಟು ಬೆದರಿಕೆ ಹಾಕಿರುತ್ತಾರೆ. ಇದರಿಂದ ಬಡ ಕುಟುಂಬಗಳಿಗೆ ತೊಂದರೆಯಾಗುತ್ತದೆ. ಸದರಿ ಕ್ರಮವನ್ನು ನಿಲ್ಲಿಸಿ ಬಡವರಿಗೆ ಮನೆ ಜಾಗವನ್ನು ಮಂಜೂರು ಮಾಡುವಂತೆ ಮತ್ತು ಈ ತುರ್ತು ಕ್ರಮವನ್ನು ನಿಲ್ಲಿಸುವಂತೆ ಕ್ರಮ ತೆಗೆದುಕೊಳ್ಳಬೇಕಾಗಿ ಪ್ರಾರ್ಥನೆ. ಈ ರೀತಿ ಸಿರಸಿ ಮತ್ತು ಸಿದ್ದಾಪುರ ಪುರಸಭೆಗಳ ಸರಹದ್ದಿನಲ್ಲಿ ಅತಿಕ್ರಮಣವಾಸ್ತಿಯಾಗಿದ್ದು, ಅದು ಒಕರೆಗಟ್ಟಲೆ ಇಲ್ಲ. 2 ಗುಂಡೆ 1½ ಗುಂಟೆ 2ಗುಂಟೆ ಗಳಜಾಗವನ್ನು ಅತಿಕ್ರಮಣ ಮಾಡಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಂತಹ ಮನೆಗಳನ್ನು ಈಗ ಪುರಸಭೆಯವರು ಕೀಳಿಸುವುದಕ್ಕೆ ಹೊರಟ್ಟಿದ್ದಾರೆ. ಈ ರೀತಿ ಹಿಂದೆ ಒಂದು ಸಲ ನೋಟೀಸ್ ಕೊಟ್ಟು ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಆಂದಿನ ಸಂಬಂಧಪಟ್ಟ ಮಂತ್ರಿಗಳಾಗಿದಂತಹ ಶ್ರೀ ಎಂ. ಚಂದ್ರಶೇಖರ್‌ರವರು ಇದನ್ನು ಸರಿಪಡಿಸುತ್ತೇನೆಂದು ಹೇಳಿದರು. ಆದರೆ ಇಲ್ಲಿಯವರೆಗೂ ಇಸವಿ ಭಂದರೂ ಕೂಡ ಅದನ್ನು ಸರಿಪಡಿಸಿದೆ, ಬಡವರ ಮನೆಗಳನ್ನು ಕೀಳಿಸುವುದಕ್ಕೆ ಅಲ್ಲಿಯ ಅಧಿಕಾರಿಗಳು ನೋಟೀಸ್ ಕೊಟ್ಟಿದ್ದಾರೆ. ಇದನ್ನು ಸರಿಪಡಿಸುವ ಬಗೆ ಹಾಗೂ ಬಡವರಿಗೆ ರಕ್ಷಣೆ ಕೊಡುವ ಬಗ್ಗೆ ಸರ್ಕಾರ ತೆಗೆದುಕೊಳ್ಳತಕ್ಕಂತಹ ಕ್ರಮಗಳೇನು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ನನ್ನ ಹತ್ತಿರ ಸದ್ಯಕ್ಕೆ ವಿವರಗಳು ಇಲ್ಲ. ವರದಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಿ. ಎಂ. ಕಾನಡೆ.—ಯಾವಾಗ

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಜಾಗ್ರತೆ ತರಿಸಿಕೊಡುತ್ತೇನೆ. ಅವರ ಮನವಿ ಪ್ರಕಾರವೇ ಹೇಳುವುದಾದರೆ, ಪುರಸಭೆಯವರು ಬಡವರ ಮನೆಗಳನ್ನು ಕಿತ್ತುಹಾಕುತ್ತೇವೆಂದು ನೋಟೀಸ್ ಕೊಟ್ಟಿದ್ದಾರೆ.ಅದರ ಪೂರ್ಣ ವಿವರಗಳು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಜಿ. ಎಂ. ಕಾನಡೆ.—ಮನೆಗಳನ್ನು ಕೀಳಿಸುವುದು ಬೇಡ ಎಂದು ಈಗಲೇ ಆದೇಶ ನೀಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಪೂರ್ಣ ವಿವರ ನನ್ನ ಹತ್ತಿರ ಇಲ್ಲ. ನಿಮ್ಮನ್ನು ಅಲ್ಲಿಂದ ತೆಗೆದಂ ಹಾಕಂತ್ತೇವೆಂದು ನೋಟೀಸ್ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರೇ ಹೇಳುತ್ತಿದ್ದಾರೆ ಅದು ಸರಿಯೋ ತಪ್ಪೋ ವಸ್ತು ಸ್ಥಿತಿ ಏನು ಎನ್ನುವುದನ್ನು ತಿಳಿದುಕೊಂಡು ನಾನು ಅದರ ಪೂರ್ಣ ವರದಿಗಳನ್ನು ತರಿಸಿಕೊಂಡು ಉತ್ತರವನ್ನು ಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಜಿ. ಎಂ. ಕಾನಡೆ.—ಯಾವಾಗ ಕೊಡುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಕಿಷಿಳರ ನಿಯಮದ ಪ್ರಕಾರ ವಿಷಯವನ್ನು ಈ ಸದನದಲ್ಲಿ ಎತ್ತತಕ್ಕ ಸಂಪ್ರದಾಯವನ್ನು ನಾವು ಇಟ್ಟುಕೊಂಡಿದ್ದೇವೆ. ಹಿಂದೆ ಕೂಡ ಇದೇ ವಿಚಾರ ಬಂದಿತ್ತು. ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಾಗ ವಿವರಗಳನ್ನು ತರಿಸಿಕೊಂಡು ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ಒಪ್ಪದೇಕಂ ಮಾನ್ಯ ಸದಸ್ಯರಾದ ಶ್ರೀಮಾನ್ ಕಾನಡೆಯವರು ಏನು ಹೇಳುತ್ತಿದ್ದಾರೆಂದರೆ ಯಾವಾಗ ಉತ್ತರವನ್ನು ಕೊಡುತ್ತೀರೆಂದು ಹೇಳಬೇಕೆಂದು ಕೇಳುತ್ತಿದ್ದಾರೆ. ಅದರ ವಿಚಾರ ನನಗೂ ಕೂಡ ಗೊತ್ತಿದೆ. ನನ್ನ ಪಕ್ಕದ ತಾಲ್ಲೂಕ ಮಾನ್ಯ ಸಚಿವರೂ ಕೂಡ ವಿವರಗಳನ್ನು ತರಿಸಬೇಕಾಗುತ್ತದೆ. ತರಿಸಬಾರದಂ ಎಂದು ಅಭಿಪ್ರಾಯವನ್ನು ವ್ಯಕ್ತ ಮಾಡಿ ಆ ರೀತಿ ಹೇಳುತ್ತಿಲ್ಲ. ಆದರೆ ಯಾವಾಗ ಕೊಡುತ್ತೀರಿ ಎಂಬುದು ಬಹಳ ಮುಖ್ಯ. ಉತ್ತರವನ್ನು ತರಿಸಿಕೊಡುತ್ತೇನೆಂದಂ ಹೇಳಿ ಕೊನೆಗೆ ತರಿಸಿ ಕೊಡದೆ ಇದ್ದಂತಹ ವಿಷಯಗಳ ದೊಡ್ಡ ಪಟ್ಟಿಯನ್ನೇ ಹಿಂದೆ ಕೊಟ್ಟಿದ್ದೂ ಕೂಡ ಉಂಟು. ಸರ್ಕಾರಕ್ಕೆ ಬೇಕಾದಷ್ಟು ವ್ಯವಸ್ಥೆಗಳು ಇವೆ. ಫೋನ್ ಮುಖಾಂತರ ವಿಚಾರದ ವಿಚಾರಗಳನ್ನು ತರಿಸಿ ಕೊಳ್ಳಬಹುದು. ಆದರೆ ಯಾವಾಗ ಎಂದಂ ಒಂದು ವೇಳೆಯನ್ನು ಹೇಳಬೇಕಾಗುತ್ತದೆ. ಯಾವಾಗ ಹೇಳುತ್ತೇನೆಂದು ಸದನದಲ್ಲಿ ಕಮಿಟ್‌ಮೆಂಟ್ ಆಗದಿದ್ದರೆ ನಾವು ಏತಕ್ಕೆ ಅಂತಹ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂಬ ಪ್ರಶ್ನೆ ಪುನ್ಮಲ್ಲಿ ಉದ್ಭವಿಸುತ್ತದೆ. ಸಚಿವರು ಸ್ಪಷ್ಟವಾಗಿ ಎಂದು ಉತ್ತರವನ್ನು ಒದಗಿಸಿ ಕೊಡಲಾಗುವುದಂ ಎಂಬುದನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಾವು ಏಕೆ ವಿಷಯವನ್ನು ಪ್ರಸ್ತಾಪ ಮಾಡಬೇಕಂ ? ಅದರ ಅವಶ್ಯಕತೆಯಾದರೂ ಏನಂ? ಜನರ ಹಕ್ಕನ್ನು ಇಂತಹ ರೂಲ್ಸ್‌ಗಳ ವಂಖಾಂತರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮನೆಗಳನ್ನು ಕೆಡವತಕ್ಕಂತಹದ್ದಕ್ಕೆ ಅವರೂ ಒಪ್ಪುತ್ತಾರೆಂದು ನಾನು ಭಾವಿಸುವುದಿಲ್ಲ. ಆದರೆ ಅಧಿಕಾರಿಗಳು ಕಿತ್ತುಹಾಕಿಬಿಟ್ಟರೆ, ಸರ್ಕಾರದ ಕೂಡ ಮೇಲೆ ಅಪಾದನೆಯನ್ನು ಹೊರಿಸಬೇಕೆಂಬ ಆಸೆ ನಮಗಿಲ್ಲ. ಯಾರೇ ಇರಲಿ, ತಪ್ಪಾಗಿಲ್ಲಾ ಗೊತ್ತಿದೆ, ಉತ್ತರ ಕೊಡುತ್ತೇವೆಂದು ಹೇಳಿ ಕೊನೆಯವರೆವಿಗೂ ಉತ್ತರವನ್ನು ಕೊಡದೆ ಇದ್ದು ಅದರ ದೊಡ್ಡ ಪಟ್ಟಿಯನ್ನೇ ಹಿಂದೆ ಸದನದಲ್ಲಿ ಇಡಲಾಗಿತ್ತು. ಅದ್ದರಿಂದ ಇದರ ಬಗ್ಗೆ ಕಾಲಮಿತಿಯನ್ನು ಹಾಕಬೇಕಂ, ಅಷ್ಟರವರೆಗೆ ಮನೆಗಳನ್ನು ಕೀಳದ ಹಾಗೆ ಆದೇಶವನ್ನು ಕೊಡಿ. ತಾವು ಯಾವಾಗ ಉತ್ತರವನ್ನು ಕೊಡಂತ್ತಾರೆಂಬುದನ್ನು ತಿಳಿಸಬೇಕು. ಇದು ಬಹಳ ಅರ್ಜೆಂಟ್ ವಿಚಾರ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಕಿಷಿಳರ ನಿಯಮದ ಪ್ರಕಾರ ಯಾವ ರೀತಿ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಬಹುದು ಎಂಬುದರ ಬಗ್ಗೆ ಪ್ರೊಸೀಜರ್ ಹೀಗಿದೆ.—

> "ಕ್ರಿಯಾಲೋಪವಲ್ಲದ ಒಂದು ವಿಚಾರವನ್ನೆತ್ತುವುದು—ಒಂದು ಕ್ರಿಯಾಲೋಪವಲ್ಲದ ದಂಥ ಯಾವ ವಿಷಯವನ್ನಾಗಲಿವಿಧಾನ ಸಭೆಯ ಗಮನಕ್ಕೆ ತರಬೇಕೆಂದು ಇಚ್ಚಿಸುವ ಸದಸ್ಯರು ವಿಧಾನ ಸಭೆಯಲ್ಲಿ ತಾವು ಎತ್ತಬೇಕೆಂದಿರುವ ವಿಷಯವನ್ನು, ಅದನ್ನು ಸೂಚಿಸ ಬೇಕೆಂದಿರುವ ಕಾರಣಗಳೊಡನೆ ಸಂಕ್ಷೇಪವಾಗಿ ತಿಳಿಸಿ ಲಿಖಿತಮೂಲಕವಾಗಿ ಕಾರ್ಯದರ್ಶಿಯವರಿಗೆ ಸೂಚನಾಪತ್ರವನ್ನು ಕೊಡಬೇಕು. ಅಧ್ಯಕ್ಷರು ಕೊಟ್ಟ ಮೇಲೆ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು ಮತ್ತು ಅಧ್ಯಕ್ಷರು ಗೊತ್ತು ಮಾಡಬಹುದಾದ ಕಾಲದಲ್ಲಿ ಮತ್ತು ಆ ದಿನ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು"

ಎಂದು ಇದೆ. ಇದರ ಬಗ್ಗೆ ನೋಟೀಸ್ ಕೊಡಬಹುದು. ಇದರ ಬಗ್ಗೆ ಸರಕಾರದ ಗಮನ ಸೆಳೆಯಬಹುದು. ಆದರೆ ತಕ್ಷಣ ಉತ್ತರ ಕೊಡಬೇಕೆಂದೇನೂ ಇಲ್ಲ. ಲೋಕಸಭೆಯಲ್ಲೂ ಕೂಡ ಇದೇ ಪದ್ಧತಿ ಇದೆ.

ಶ್ರೀ ಎಂ.ಎಸ್. ಪಾಟೀಲ್.—ಸರ್ಕಾರ ಉತ್ತರ ಕೊಡಬೇಕೆಂದೇನೂ ಇಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮಾವಳಿ ೩೫೪ರ ವ್ಯಾಪ್ತಿಯಲ್ಲಿ ಬರತಕ್ಕ ವಿಚಾರಗಳನ್ನು ಸಭೆಯ ಗಮನಕ್ಕೆ, ಸರ್ಕಾರದ ಗಮನಕ್ಕೆ ತರತಕ್ಕ ಹಕ್ಕು ಸದಸ್ಯರಿಗೆ ಇದೆ. ಆದರೆ ಎಲ್ಲದಕ್ಕೂ ಸರ್ಕಾರ ಉತ್ತರ ಕೊಡಲೇಬೇಕಾಗಿಲ್ಲ. ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಆದರೆ ಇಂತಿಷ್ಟೇ ಅವಧಿಯಲ್ಲಿ ಕೊಡಬೇಕೆಂದು ಇಲ್ಲ. ಈ ಪರಿಪಾಠ ಎಲ್ಲಾ ಸಭೆಗಳಲ್ಲಿಯೂ ಇದೆ. ಲೋಕಸಭೆಯಲ್ಲಿ ನೀವು ನೋಡಿರಬಹುದು. ಅಲ್ಲಿ ಅನೇಕ ಪೋಟೀಸಗಳಿಗೆ ಉತ್ತರವೇ ಬರುವುದಿಲ್ಲ.

ಶ್ರೀ ಜಿ.ಎಂ.ಕಾನಡೆ- ಇದು ವಿಧಾನಸಭೆ. ಇಲ್ಲಿ ನಾವು ಕೇಳುತ್ತಿರುವುದು. (ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ—ಇಲ್ಲಿ ಏನು ಒಂದು ನಿಯಮ ಮತ್ತು ಸಂಪ್ರದಾಯ ಇದೆ ಅದಕ್ಕನುಗುಣವಾಗಿ, ಮಹತ್ವದ ವಿಚಾರ ಇದ್ದರೆ ಸರ್ಕಾರ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್—ಮಾನ್ಯ ಬೊಮ್ಮಾಯಿಯವರ ಹೇಳಿಕೆಯಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಅವರು ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಸರ್ಕಾರದ ಗಮನ ಸೆಳೆಯುವುದು ಎಂದರೆ.....

ಶ್ರೀ ಎ. ಲಕ್ಷ್ಮೀಸಾಗರ್—ಗಮನ ಸೆಳೆಯುವ ಸೂಚನೆ ಅಂದರೆ ಏನು ಮಾಡಬೇಕೆಂದು ಇದೆ.

ಶ್ರೀ ಕೆ.ಹೆಚ್. ಪಾಟೀಲ್—ಅವರ ಮೇರೆಯನ್ನು ನಮ್ಮ ಕಡೆ ತಿರುಗಿಸುವುದು ಎಂದಲ್ಲ. We have equal rights on par with the Ministers. We want to know what is going on in the Government and how they are protecting the interests of the people. In this csae the poor people are harassed. We want to know whether the official machinery is are sponsible or the political machinery is responsible. My request is, that the Govern-ment must be pleased to immediately get the information and give a reply to us.

ಶ್ರೀ ಎಸ್. ಆರ್. ಬೊಮ್ಮಾಯಿ —ಹಿರಿಯ ಸದಸ್ಯರಾದ ಪಾಟೀಲರಿಗೆ ನಾವು ನಿಯಮಗಳನ್ನು ಹೇಳಿಕೊಡಬೇಕಾಗಿಲ್ಲ. ಗಮನ ಸೆಳೆಯಂತಕ್ಕ ಪ್ರಾವಿಷನ್ ಇದೆ. ಆ ರೂಲ್ಸ್ ಪ್ರಕಾರ ಕೇಳಿದರೆ ಉತ್ತರ ಕೊಡಲೇಬೇಕಾಗುತ್ತದೆ. ಅದು ಸರ್ಕಾರದ ಕರ್ತವ್ಯ ಕೂಡ ಆಗಿರುತ್ತದೆ. ರೂಲ್ ೩೫೪ ಏನಿದೆ ಇದರ ಕೆಳಗೆ ಪ್ರಶ್ನೆ ಕೇಳುವುದು ಎಂದರೆ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಅಷ್ಟೇ ಆಗಿದೆ. ಆದ್ದರಿಂದ, ಸರಿಯಾದ ನಿಯಮದ ಕೆಳಗೆ ಪ್ರಶ್ನೆ ಕೇಳಿ ಎಂದು ಹೇಳುತ್ತೇನೆ.

ಶ್ರೀ ಎಸ್ ಬಂಗಾರಪ್ಪ.—ವಿಷಯ ಯಾವುದು ಎಂಬ ವಿಚಾರವನ್ನು ಅನಂತರ ತೆಗೆದುಕೊಳ್ಳೋಣ. ನಾವು ಇಲ್ಲಿ ಮಾತನಾಡುತ್ತಿರತಕ್ಕದ್ದು ಈ ಸದನದಲ್ಲಿ ತಮ್ಮ ಅಪ್ಪಣೆ ಪಡೆದು ನಿಯಮಾವಳಿ ೩೫೪ರ ಪ್ರಕಾರ ಪ್ರಸ್ತಾಪ ಮಾಡುತ್ತಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಉತ್ತರಿಸಬೇಕೇ ಬೇಡವೇ ಎಂಬುದು ಈಗ ನಮ್ಮ ಮುಂದಿರತಕ್ಕ ಪ್ರಶ್ನೆ. ನಿಯಮಾವಳಿ ೩೫೪ನ್ನು ಮಾನ್ಯ ಬೊಮ್ಮಾಯಿಯವರು ಓದಿದ್ದಾರೆ. ಇದರ ಬಗ್ಗೆ ಹಿಂದೆಯೂ ಸಾಕಷ್ಟು ಚರ್ಚೆ ಮಾಡಿದ್ದೇವೆ. ಲೋಕಸಭೆಯಲ್ಲಿ ಇದಕ್ಕೆ ಆ ರೀತಿ ಪ್ರಾವಿಷನ್ ಇಲ್ಲವೆಂದು ಹೇಳಿದರೂ ಕೂಡ ನಾವು ಈ ಸದನದಲ್ಲಿ ಒಂದು ಪರಿಪಾಠವನ್ನು ಕಳೆದ ಸಾರಿ ಒಪ್ಪಿಕೊಂಡಿದ್ದೇವೆ. ತಾವು ಯಾವುದೇ ವಿಷಯಕ್ಕೆ ಅಪ್ಪಣೆ ಕೊಡಬೇಕಾದರೆ ಕಾಲವನ್ನು ನೋಡಿ ಅಪ್ಪಣೆ ಕೊಡುತ್ತೀರಿ. ತಾವು ಒಪ್ಪಿಗೆ ಕೊಟ್ಟು ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದ ಮೇಲೆ ಅದಕ್ಕೆ ಉತ್ತರಿಸುವ ಸಂದರ್ಭದಲ್ಲಿ ಬೊಮ್ಮಾಯಿಯವರು ಹೇಳಿದರು, ನಮ್ಮ ಗಮನಕ್ಕೆ ತರತಕ್ಕದ್ದು ಅಷ್ಟೆ ಎಂದು. ಇಲ್ಲಿ ಗಮನ ಸೆಳೆಯುವುದು ಮತ್ತು ಗಮನಕ್ಕೆ ತರು

ವುದು ಎಂಬ ಎರಡು ಪ್ರಕಾರಗಳಿವೆ. ಅದಕ್ಕೆ ಹೇಗೆ ಉತ್ತರ ಕೊಡಬಹುದೆಂಬ ಬಗ್ಗೆ ವ್ಯಾಖ್ಯಾನ ಕೊಟ್ಟರು. ವಿಷಯ ಬಹಳ ಪ್ರಾಮುಖ್ಯವಾದುದೆಂದು ಕಂಡುಬಂದರೆ ಮುಖ್ಯಮಂತ್ರಿಗಳು ಉತ್ತರಿಸುತ್ತೇವೆಂದು ಹೇಳಿದರು ಇದರಿಂದ, ಅವರು ಇಷ್ಟು ಬಂದಹಾಗೆ ಮಾಡಬಹುದೆಂಬ ಅಭಿಪ್ರಾಯ ಬರುತ್ತದೆ. ಪ್ರಾಮುಖ್ಯತೆ, ಜರೂರು ರಾತಿ ಇಷಯೇ ಇಲ್ಲವೇ ಎಂಬುದನ್ನು ತೀರ್ಮಾನಿಸುವುದು ಸರ್ಕಾರಕ್ಕೆ ಮತ್ತು ಸಚಿವರಿಗೆ ಬಿಟ್ಟದ್ದು ಆಗಿದೆ. ಸದನಕ್ಕೆ ನಮಗೆ ನಿಮಗೆ ಸಂಬಂಧ ಇಲ್ಲದ ವಿಷಯವಾಗಿದೆ. ತಾವು ಹೆಸರು ಕರೆಯುವುದು, ನಾವು ಪ್ರಸ್ತಾಪ ಮಾಡುವುದು, ವಿಷಯ ಪ್ರಾಮುಖ್ಯತೆ ದುತ್ತು ಅದಕ್ಕೆ ಉತ್ತರ ಕೊಡಬೇಕೇ ಬೇಡವೇ ಎಂಬುದನ್ನು ಆನಂತರ ಅವರು ತೀರ್ಮಾನ ಮಾಡುವುದು. ಇದು ಖಂಡಿತ ಸರಿಯಾದ ನೀತಿಯಲ್ಲ, ಒಳ್ಳೆಯದೂ ಅಲ್ಲ. ನಾವು ಒಂದು ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಅದೇನೆಂದರೆ ವಿಷಯ ಪ್ರಸ್ತಾಪ ಆದ ಕೂಡಲೇ ಅದರ ಪ್ರಾಮುಖ್ಯತೆ ಅರ್ಥವಾಗುತ್ತದೆ. ಅದು ಪ್ರಮುಖವಾದುದು ಹೌದೋ ಅಲ್ಲವೋ ಎಂಬುದು ನವಗೂ ಕೂಡ ಗೊತ್ತಾಗುತ್ತದೆ. ಸಮ್ಮನೆ ವ್ಯರ್ಥಾಲಾಪ ಮಾಡಿ ನಮ್ಮ ಕಾಲವನ್ನು ಹಾಳು ಮಾಡಿಕೊಳ್ಳುವುದು ಬೇಡ. ಇದಕ್ಕೆ ಪ್ರಾಮುಖ್ಯತೆ ಇರುವುದರಿಂದ ಇದನ್ನು ಪ್ರಸ್ತಾಪ ಮಾಡಲು ಅವಕಾಶ ನೀಡಿದ್ದೀರಿ. ಆಂದಾಗ ಇದಕ್ಕೆ ಸಚಿವರು ಉತ್ತರ ಕೊಡಬೇಕು ಅನ್ನಿಸುವುದಿಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ತರ ಕೊಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ಕೊಡುತ್ತೀರೆಂಬುದು ಮುಖ್ಯ ಉತ್ತರ ಕೊಡುವುದೇ ಇಲ್ಲವೆಂದರೆ ನಿಯಮಾವಳಿಯನ್ನು ಬದಲಾವಣೆ ಮಾಡಬೇಕೆಂಬ ವಿಚಾರವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಲ್ಲಿಯವರೆಗೆ ನಾವು ಏನು ಮಾಡಬೇಕಂ ? ನಮಗೆ ತಡೆಯುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಮನೆ ಕೀಳು ಶ್ರೀರ ಬೇಕಾದರೆ ನಿಯಮಾವಳಿಯನ್ನು ಹಿಡಿದುಕೊಂಡು ಕುಳಿತುಕೊಳ್ಳಿವುದಕ್ಕೆ ಸಾಧ್ಯವಿಲ್ಲ. ಅವರಿಗೆ ಅನ್ಯಾಯವಾಗಿದ್ದರೆ ನ್ಯಾಯ ದೊರಕಿಸಿಕೊಡತಕ್ಕ ಜವಾಬ್ದಾರಿ ನಮ್ಮದು ಮತ್ತು ಸರ್ಕಾರದ್ದು ಆಗಿದೆ. ಆದ್ದರಿಂದ, ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಉತ್ತರ ಕೊಡುವುದಕ್ಕೆ ಬೇಕಾದರೆ ಎರಡು ದಿವಸ ಜಾಸ್ತಿ ತೆಗೆದುಕೊಳ್ಳಿ. ಆದರೆ ಉತ್ತರ ಕೊಡುವುದಿಲ್ಲ ಎನ್ನುವುದಾದರೆ ಆ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು. ಆದರ ವ್ಯಾಪ್ತಿಯ ಆಳ ಅಭ್ಯಾಸ, ವಿಚಾರ ಮಂಥನ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮಾವಳಿಯನ್ನು ಪಾಸ್ ಮಾಡಿದ್ದು ಈ ಮನೆ. ಆದನ್ನು ನಾವೆಲ್ಲಾ ಸರ್ವಾನುಮತದಿಂದ ಒಪ್ಪಿದ್ದೇವೆ. ನಿಯಮಾವಳಿಗಳ ಪ್ರಕಾರ ಸಭೆಯಲ್ಲಿ ನಡೆದುಕೊಳ್ಳತಕ್ಕದ್ದು ಈ ಮನೆಯ ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿದೆ. ಬೇರೆ ಬೇರೆ ನಿಯಮಾವಳಿಗಳಲ್ಲಿ ಕೂಡಲೇ ಉತ್ತರ ಪಡೆಯಲಿಕ್ಕೆ ಅವಕಾಶ ಇದೆ. ಗಮನ ಸೆಳೆಯುವ ಸೂಚನೆ ಮೂಲಕ ತಕ್ಷಣ ಉತ್ತರ ಪಡೆಯಬಹುದು. ರೂಲ್ ೩೩ಳಿ ಪ್ರಕಾರ ಕೇಳಿದಾಗ ಸರ್ಕಾರ ಆಲೋಚನೆ ಮಾಡಿ ಉತ್ತರ ಕೊಡುತ್ತದೆ. ಸರ್ಕಾರದಲ್ಲಿರುವವರಿಗೆ ಜವಾಬ್ದಾರಿ ಇದೆ, ಬುದ್ಧಿ ಇದೆ. ಯಾವುದು ಮಹತ್ವದ್ದು ಯಾವುದು ಅಲ್ಲವೆಂಬುದು ಗೊತ್ತಿದೆ. ರೂಲ್ ೩೩ಳಿಳಿರ ಕೆಳಗೆ, ರೂಲ್ ೨೨೪ರ ಕೆಳಗೆ ನೋಟೀಸ್ ಕೊಡಬಹುದು, ಆದರೆ ಆದನ್ನು ಒಂದೇ ದಿವಸ ತೆಗೆದುಕೊಳ್ಳುವುದು, ಬಿಡುವುದು ಅಧ್ಯಕ್ಷರಿಗೆ ಬಿಟ್ಟದ್ದು, ಸಾಮಾನ್ಯವಾಗಿ, ನಾವು ಬಂದ ಪ್ರಶ್ನೆಗೆ ಕೂಡಲೇ ಉತ್ತರಿಸುತ್ತೇವೆ, ಕೆಲವಕ್ಕೆ ಇಲಾಖೆಯಿಂದ ಮಾಹಿತಿ ತರಿಸಿಕೊಡುವುದು ಇರುತ್ತದೆ. ಆದ್ದರಿಂದ, ನಾನು ನಿಯಮದ ಚೌಕಟ್ಟಿನಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ವಿಷಯದ ಮಹತ್ವದ ಮೇಲೆ ಉತ್ತರಿಸುತ್ತೇವೆ. ನೀವು ತಕ್ಷಣ ಉತ್ತರ ಪಡೆಯುವುದಕ್ಕೆ ಬೇರೆ ಬೇರೆ ನಿಯಮಾವಳಿಗಳಿರುವುದರಿಂದ ಆ ನಿಯಮಾವಳಿಗಳ ಕೆಳಗೆ ಪ್ರಸ್ತಾಪ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಅವರನ್ನು ಹೊರಗೆ ಹಾಕತಕ್ಕದ್ದು ಸರಿಯೋ ತಪ್ಪೋ ಎಂಬುದು ಈ ಮನೆಗೆ ಗೊತ್ತಾಗುತ್ತದೆ. ಆದ್ದರಿಂದ, ಸರ್ಕಾರ ಈ ದಿಸೆಯಲ್ಲಿ ಸಾಧ್ಯವಾದಷ್ಟು ಬೇಗ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದು ತಮಗೆ ಮಹತ್ವದ ವಿಚಾರ ಅನ್ನಿಸುವುದಿಲ್ಲವೆ ?

ಶ್ರೀ ಎಂ. ವೀರಪ್ಪ ಮೊಯಿಲಿ. –೩೩ಳಿನೇ ನಿಯಮವನ್ನು ಏತಕ್ಕೆ ಆಳವಡಿಸಿದ್ದೇವೆಂದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಶೂನ್ಯ ವೇಳೆಯಲ್ಲಿ ತಂದು ತಕ್ಷಣ ಪ್ರಸ್ತಾಪ ಮಾಡುವುದಕ್ಕಿಂತ ಅರ್ಧ ಗಂಟೆ ಮುಂಚೆ ನೋಟೀಸ್ ಕೊಟ್ಟು, ಪ್ರಶ್ನೆಯನ್ನು ಎತ್ತತಕ್ಕದ್ದು ನಾವು ಒಪ್ಪಿಕೊಂಡಿರುವ ನಿಯಮ. ಇದಕ್ಕೆ ಬೆಲೆ ಇಲ್ಲವೆಂದರೆ ನಾವು ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಬಹುದೆಂದು ಮಾಡ

ಬಹಳಾಗಿತ್ತು. ಇದರ ಉದ್ದೇಶವೇನೆಂದರೆ ಬಹಳ ಜರೂರಾದ ಪ್ರಶ್ನೆಗಳು, ಸಮಸ್ಯೆಗಳು ಉದ್ಭವವಾದಾಗ ಅದರ ಗಂಭೀರತೆಯನ್ನು ಅರಿತು ಸದಸ್ಯರು ಪ್ರಶ್ನೆಯನ್ನು ಎತ್ತುತ್ತಾರೆ. ಇಲ್ಲದಿದ್ದರೆ, ಗವರ್ನ ಸೆಳೆಯಂಬ ಸೂಚನೆ ಇದೆ, ಮತ್ತು ಬೇರೆ ಬೇರೆ ನಿಯಮಗಳು ಇವೆ. ಇದು ಬಹಳ ಪ್ರಮುಖವಾದ ಮತ್ತು ಜರೂರಾದ ವಿಚಾರವಾಗಿದೆ. ಸದಸ್ಯರು ಪ್ರಶ್ನೆ ಎತ್ತುತಕ್ಕದ್ದು ಅಥವಾ ಮಂತ್ರಿಗಳು ಉತ್ತರಿಸತಕ್ಕದ್ದು ಪ್ರಮುಖವಲ್ಲ. ಪ್ರಶ್ನೆಯನ್ನು ಎತ್ತಿದಾಗ ಅದರ ಗಂಭೀರತೆಯನ್ನು ಅರಿತು ಉತ್ತರವನ್ನು ಇಂಥ ದಿವಸ ಕೊಡುತ್ತೇವೆಂದು ಹೇಳಿ. ಅದರ ಬಗ್ಗೆ ಕಾರ್ಯಕ್ರಮವನ್ನು ಜರೂರಾಗಿ ಕೈಗೊಳ್ಳಬೇಕೆಂದು ಮನವರಿಕೆಯಾದರೆ ಅದರ ಬಗ್ಗೆ ನೀವು ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ನಾವು ಬರೀ ಲಿಟರರಿ ನಿಯಮಗಳನ್ನು ಪಾಲಿಸಿ ಮಾಡಿ ಪ್ರಶ್ನೆ ಎತ್ತುವುದು, ನೀವು ಉತ್ತರ ಕೊಡುವುದಂ ಇಷ್ಟಕ್ಕೆ ಈ ಸದನವನ್ನು ಸೀಮಿತಗೊಳಿಸಬಾರದು. ಆ ವಿಚಾರದ ಬಗ್ಗೆ ಜರೂರಾಗಿ ಕ್ರಮ ತೆಗೆದುಕೊಳ್ಳತಕ್ಕ ವಿಚಾರ ತಮಗೆ ಮನವರಿಕೆ ಆದಾಗ ಆದನ್ನು ಕಾರ್ಯಾಚರಣೆ ಮಾಡಿ, ಉತ್ತರವನ್ನು ಯಾವಾಗಲಾದರೂ ಕೊಡಿ. ಇದನ್ನು ಅಕಾಡೆಮಿಕ್ ಆಗಿ ತೆಗೆದುಕೊಂಡು ತಾವು ಉತ್ತರ ಹೇಳುವುದಿದ್ದರೆ ನಾವು ಮತ್ತೆ ಶೂನ್ಯ ವೇಳೆಗೆ ಹೋಗುವುದು ಒಳ್ಳೆಯದು. ಶೂನ್ಯ ವೇಳೆಯಲ್ಲಾದರೆ ಗೊಂದಲ ಗಲಾಟೆ ಮಾಡುವುದಕ್ಕೆ ಬರುತ್ತದೆ. ಆದರೆ ನಿಯಮದ ಕಟ್ಟುಪಾಡಿನ ಒಳಗೆ ತಂದಾಗ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಇದನ್ನು ವಿವೇಚನೆಯಿಂದ ಪರಿಗಣನೆ ಮಾಡಬೇಕಾಗಿದೆಯೇ ಹೊರತು, ಪ್ರಶ್ನೆ–ಉತ್ತರಕ್ಕೆ ಸೀಮಿತಗೊಳಿಸಿದರೆ ಸಾಧ್ಯವಾಗುವುದಿಲ್ಲ. ಒಂದು ಪಕ್ಷ ಇದೇ ರೀತಿ ಮುಂದುವರಿದರೆ ಹೊಸ ಸದಸ್ಯರೇನು ಬಂದಿದ್ದಾರೆ ಅವರು ರೂಲ್ ಪುಸ್ತಿಕ ಹೋಲಿನ ಸಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಎರಡೂ ವಿಚಾರವನ್ನು ಮಾನ್ಯ ಅಧ್ಯಕ್ಷರು ದಯಮಾಡಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಬೇಕಾದರೆ ಪುಸ್ತಿಕ ಸೂಚನೆಯನ್ನು ಸದನ ಪ್ರಾರಂಭವಾಗುವುದಕ್ಕೆ ಅರ್ಧ ಗಂಟೆ ಅಥವಾ ಒಂದು ಗಂಟೆ ಮುಂಚಿತವಾಗಿ ಕೊಡಬೇಕು ಎಂದು ಒತ್ತಾಯ ಮಾಡಿ. ಸದನ ೧೧ ಗಂಟೆಗೆ ಸೇರುವುದಿದ್ದರೆ ೧೦ ಗಂಟೆಗೆ ಸರಿಯಾಗಿ ನೋಟೀಸ್ ಕೊಡಬೇಕೆಂದು ಹೇಳಿ. ಆದರಿಂದ ಸರ್ಕಾರದವರಿಗೂ ಉತ್ತರ ತರಿಸಲು ಅನುಕೂಲವಾಗುತ್ತದೆ. ಸರ್ಕಾರ ಕೂಡಲೇ ಇಂಥ ವಿಷಯಂಗಳ ಕಡೆ ಗಮನ ಕೊಡಲಿ ಉತ್ತರ ಬೇಕಾದರೆ ಯಾವಾಗಲಾದರೂ ಕೊಟ್ಟರೂ ಚಿಂತೆಯಿಲ್ಲ. ಮಾನ್ಯ ಸದಸ್ಯರು ಹೇಳುವ ವಿಷಯದಲ್ಲಿ ಸತ್ಯಾಂಶವಿದ್ದರೆ ಜರೂರಾಗಿ ತಾತ್ಕಾಲಿಕವಾಗಿ ಹುಕುಂ ಕೊಡಬೇಕಾದ ಸಂದರ್ಭ ಬಂದರೆ ಅದನ್ನು ಕೊಡುವುದಕ್ಕೆ ಸರ್ಕಾರ ಹಿಂಜರಿಯಬಾರದು. ಉತ್ತರ ಬೇಕಾದರೆ ಸಂಜೆಯೊಳಗೆ ಕೊಡಬಹುದು. ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಅನೇಕಬಾರಿ ಸಂಜೆಯೊಳಗೆ ಉತ್ತರ ಕೊಟ್ಟರತಕ್ಕ ಪ್ರಸಂಗಗಳಿವೆ. ಆದ್ದರಿಂದ ಈಗಲೇ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಮಂತ್ರಿಗಳು ಕುಳಿತುಕೊಳ್ಳುವುದು ಸಮರ್ಪಕವಾಗುವುದಿಲ್ಲ ಎಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಬಯಸುತ್ತೇನೆ.

ಶ್ರೀ ಜಿ. ಎಸ್. ಶಿವಣಂಜಪ್ಪ.—ಈಗ ಲ್ಯಾಂಡ್ ರೆವಿನ್ಯೂ ಆಕ್ಟಿಗೆ ತಿದ್ದುಪಡಿ ತರುತ್ತಿದ್ದಾರೆ. ಬಗರ್‌ಹುಕುಂ ಮನೆಗಳನ್ನು ಯಾರಾದರೂ ಕಟ್ಟಿದ್ದರೆ ಅಂಥವರಿಗೆ ಕಾಂಪೌಂಡ್ ಮಾಡಿ ಫೈನ್ ಹಾಕಬೇಕು ಎಂದು ಮಾಡುತ್ತಿದ್ದಾರೆ. ಆ ಕಾನೂನನ್ನು ತರುವವರೆಗಾದರೂ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರೆ ಚೆನ್ನಾಗಿತ್ತು. ಈ ತಿದ್ದುಪಡಿಯನ್ನು ಯಾವಾಗ ತರುತ್ತೀರಿ? ಮುಂದೆ ತಿದ್ದುಪಡಿ ತರುವವರೆಗಾದರೂ ತಡೆಯಾಜ್ಞೆ ಕೊಡಿ. ಬಡವರ ಸರ್ಕಾರ ಇದು ಎಂದು ಹೇಳುವ ನಿಯಮಾವಳಿ ಪ್ರಾತು ಏತಕ್ಕೆ ಆಡುತ್ತೀರಿ ? ನಿಯಮ ೯೫ ಮತ್ತು ೯೬ಕ್ಕೆ ಏನು ತಿದ್ದುಪಡಿ ತರುತ್ತಿದ್ದೀರಿ ಆಲ್ಲಿಯವರೆಗಾದರೂ ಸ್ವೇ ಕೊಡಿ. ನೀವೇ ರೆವಿನ್ಯೂ ಮಂತ್ರಿಗಳಾಗಿರುವುದರಿಂದ (ಮಾನ್ಯ ಸಚಿವರಾದ ಬೊಮ್ಮಾಯಿಯವರಿಗೆ) ಸ್ವೇ ಕೊಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಹಿಂದೆ ಸಭೆಯಲ್ಲಿ ನಿರ್ಣಯ ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರಾಗಿದ್ದ ವೀರಪ್ಪ ಮೊಯಿಲಿಯವರಿಗೂ ಅದು ಗೊತ್ತಿದೆ. ಹಿಂದೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಪುಸ್ತಿಕನೇ ನಿಯಮದ ಮೇಲೆ ಪ್ರಸ್ತಾಪಿತಕ್ಕ ವಿಷಯಗಳಿಗೆ ಅರ್ಧ ಗಂಟೆ ಕಾಲಮಿತಿ ಇರಬೇಕೆಂದು ಹಿಂದೆ ನಿರ್ಣಯ ಮಾಡಿದ್ದೇವೆ. ದಿನಕ್ಕೆ ಎಷ್ಟು ನೋಟೀಸ್‌ಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ಚರ್ಚೆ ಮಾಡಿದ್ದೇವೆ. ಪುನಃ ಬೇಕಾದರೆ ಪುಸ್ತಿಕ ನಿಯಮದ ಮೇಲೆ ಪ್ರಸ್ತಾಪಿಸತಕ್ಕ ವಿಚಾರದಲ್ಲಿ ಯಾವರೀತಿಯಾಗಿ ಚರ್ಚೆ ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡೋಣ. ಪುಸ್ತಿಕರ ಕೆಳಗೆ ಬಂದ ವಿಚಾರವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟು ಸರಿಯಾದ ಉತ್ತರವನ್ನು ಪಡೆಯತಕ್ಕ

ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬೇಕಾದರೆ ಬರೋಣ ಎಂದು ಸಲಹೆ ಮಾಡುತ್ತೇನೆ. ಮಾನ್ಯ ಶಿವನಂಜಪ್ಪನವರು ಹೇಳಿದಂಥ ಪಂಸೂದೆಯನ್ನು ಇವತ್ತೇ ಇಂಟ್ರೊಡ್ಯೂಸ್ ಮಾಡುತ್ತೇವೆ. ಸಿರಸಿ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ಬಗ್ಗೆ ಆದಷ್ಟು ಜಾಗ್ರತೆ ಅವರು ಉತ್ತರ ಕೊಡುತ್ತಾರೆ. ಶಿವನಂಜಪ್ಪನವರು ಹೇಳತಕ್ಕ ಪಂಸೂದೆಯನ್ನು ಇವತ್ತೇ ಸದನದ ಮುಂದೆ ತಂದು ಪಾಸ್ ಮಾಡುತ್ತೇವೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಈ ವಿಭಾಗದಲ್ಲಿ ತಾವು ಸ್ಟೇ ಕೊಡಬಹುದಲ್ಲವೇ ?

ಅಧ್ಯಕ್ಷರು.—೨೫ ವರ್ಷಗಳಿಂದ ಆ ಮನೆಯಲ್ಲಿದ್ದರೆ ಮನೆ ಕಿತ್ತುಹಾಕಿ ಗಡಿಗೆ, ಮಡಿಕೆ ಎಲ್ಲವನ್ನೂ ಹೊರಗೆ ಹಾಕಿದರೆ ತೊಂದರೆಯಾಗುತ್ತದೆ ಎಂಬ ಕಳಕಳಿಯನ್ನು ತಾವು ವ್ಯಕ್ತಮಾಡಿದ್ದೀರಿ ಮಾನ್ಯ ಮಂತ್ರಿಗಳು ಸಭ್ಯಕ್ಕೆ ಆದನ್ನು ತಡೆಹಿಡಿದು ಮುಂದಿನ ವಿಚಾರ ಮಾಡಿ ಎಂದು ಹೇಳುತ್ತಿದ್ದಾರೆ. ತಮ್ಮ ಕಳಕಳಿ ಏನು ಎಂಬುದು ಅರ್ಥವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಪೂರ್ವಾಪರ ಯೋಜನೆ ಮಾಡದೆ ನೇರವಾಗಿ ಉತ್ತರ ಕೊಡತಕ್ಕ ಸ್ಥಿತಿಯಲ್ಲಿ ನಾನು ಇಲ್ಲ. ಮಾನ್ಯ ಸದಸ್ಯರು ಹೇಳಿದ್ದುದು ಸರಿ ಎಂದು ಒಪ್ಪಿಕೊಂಡರೂ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ವರದಿ ತರಿಸಿಕೊಂಡು ಉತ್ತರ ಒದಗಿಸಿಕೊಡುತ್ತೇವೆಂದು ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಕಾನಡೆಯವರೆ ತಾವು ಒಂದು ಕೆಲಸ ಮಾಡಿ. ಅಧಿವೇಶನ ಮುಗಿದ ಮೇಲೆ ಮಂತ್ರಿಗಳ ಛೇಂಬರ್‌ಗೆ ಹೋಗಿ ಚರ್ಚೆಮಾಡಿ. ಮುಂದೆ ವಿಚಾರ ಮಾಡುವವರೆಗೂ ಬಡವರ ಮನೆ ಬಿಡಿಸಬೇಡಿ, ಗಡಿಗೆ ಮಡಕೆ ಹೊರಗೆ ಇಡಬೇಡಿ ಎಂದು ಅವರಿಗೆ ಹೇಳಿ. ಅವರ ಛೇಂಬರ್‌ಗೆ ಹೋದಿ ಡಿಸ್‌ಕಸ್ ಮಾಡಿದರೆ ನಿಮ್ಮ ಕೆಲಸವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ತಮ್ಮ ಮೊದಲನೆಯ ಸಲಹೆ ಒಳ್ಳೆಯದು. ಸದನದಲ್ಲಿ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಸಾಕು. ಆದರೆ ಮಂತ್ರಿಗಳ ಛೇಂಬರ್‌ಗೆ ಹೋಗಿ ಪ್ರೈವೇಟ್ ಡಿಸ್‌ಕಷನ್ ಮಾಡುವುದು ಬೇರೆ ವಿಚಾರವಾಗುತ್ತದೆ.

ಅಧ್ಯಕ್ಷರು.—ಇಲ್ಲ, ಅಫಿಷಿಯಲ್ಲಾಗಿಯೇ ಮಾಡಲಿ. ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಚರ್ಚೆ ಮಾಡುವುದಕ್ಕೆ ಅವರಿಗೆ ಹಕ್ಕಿದೆ.

ಶ್ರೀ ಎಸ್. ಬಂಗಾರಪ್ಪ .— ಸದನದಲ್ಲಿ ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮುಂದೆ ಕಾನೂನು ತರುವವರೆಗೂ ಗುಡಿಸಲುಗಳನ್ನು ಕೆಡವುದಿಲ್ಲ ಎಂದು ಮಂತ್ರಿಗಳು ಹೇಳಲಿ, ಆದೇಶ ಕೊಡುತ್ತೇವೆ ಎಂದು ಹೇಳಲಿ. ಸದಸ್ಯರು ಮಂತ್ರಿಗಳ ಹತ್ತಿರ ಹೋಗಿ ಪ್ರೈವೇಟಾಗಿ ಮಾತನಾಡತಕ್ಕದ್ದು ಬೇರೆ ವಿಚಾರವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಕಾನಡೆಯವರು ಹೋಗಿ ಮಂತ್ರಿಗಳ ಹತ್ತಿರ ಮಾತನಾಡಿ ವಿಷಯ ತಿಳಿದು ಕೊಳ್ಳಲಿ. It will render justice to both of them.

ಶ್ರೀ ಎಸ್. ಬಂಗಾರಪ್ಪ .— ಈಗ ಮಂತ್ರಿಗಳು ಮನೆ ಕೆಡವದಂತೆ ಆದೇಶ ಕೊಡಲಿ. ಕೊನೆಯ ಪಕ್ಷ ಆದಾದರೂ ಮಾಡಲಿ. ಅದಕ್ಕೆ ಏನು ತೊಂದರೆಯಿದೆ ?

ಶ್ರೀ ಎ. ಲಕ್ಷಿಸಾಗರ್ ,— ನಾನು ಹೇಳಿದ್ದೇನೆ. ಈ ನಿಯಮಾವಳಿ ಷಿಷಿಳಿ ರ ವ್ಯಾಪ್ತಿ...

ಶ್ರೀ ಕೆ. ಎಚ್. ಶ್ರೀನಿವಾಸ್ .— ಮತ್ತೆ ನಿಯಮಾವಳಿಯನ್ನು ಏತಕ್ಕೆ ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ .— ನೀವು ನಿಯಮಾವಳಿ ಬಗ್ಗೆ ಮಾತನಾಡಿದರೆ ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎ. ಲಕ್ಷೀಸಾಗರ್ .— ಮಾನ್ಯ ವಿರೋಧಪಕ್ಷದ ನಾಯಕರೂ ತಮ್ಮ ಅಭಿಪ್ರಾಯಗಳನ್ನು ಷಿಷಿಳಿ ರ ನಿಯಮದ ಬಗ್ಗೆ ಹೇಳಿದ್ದಾರೆ.

ಶ್ರೀ ಗೋಪಾಲ ಮಂಕುಂದ ಕಾನಡೆ .— ಇಲ್ಲಿಯ ನಿಯಮಾವಳಿ ಅಲ್ಲಿ ನಡೆಯುವುದಿಲ್ಲ. ಅಧಿಕಾರಿಗಳು ಮನೆ ಕೀಳುತ್ತಾರೆ.

ಒಬ್ಬ ಸದಸ್ಯರು .— ''ರೋಂ ನಗರ ಉರಿಯುತ್ತಿದ್ದರೆ ನ್ಯೂರೋ ಪಿಟೀಲು ಭಾರಿಸುತ್ತಿದ್ದನಂತೆ'' ಹಾಗೆ ಮಂತ್ರಿಗಳು ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮಿಸಾಗರ್ .— ಮಾನ್ಯ ಸಭೆ ಯಾವರೀತಿ ನಡೆಯಬೇಕೆಂಬ ಬಗ್ಗೆ...

ಶ್ರೀ ಗೋಪಾಲ ಮುಕುಂದ ಕಾನಡೆ .— ಬಡವರಿಗೆ ದುಡ್ಡು ಇರುವುದಿಲ್ಲ. ಅವರ ಮನೆ ಕಿತ್ತರೆ ಅವರು ಏನು ಮಾಡಬೇಕು ? ನಮ್ಮಲ್ಲಿ ತಾರ್ಸಿ ಅಥವಾ ಹೆಂಚಿನ ಮನೆಗಳಿಲ್ಲ. ಹುಲ್ಲಿನಿಂದ ಕಟ್ಟಿರುವ ಮನೆಗಳಿವೆ. ಅದನ್ನು ಒಂದು ನಿಮಿಶಕ್ಕೆ ಕಿತ್ತುಹಾಕಿಬಿಡಬಹುದು. ಸಿರಸ್ತಿ ಸಿದ್ದಾಪುರಗಳಲ್ಲಿ ಇಲ್ಲಿ ಇರುವಂತೆತಾರಸಿ ಮನೆಗಳಿಲ್ಲ

ಶ್ರೀ ಪಂಪಾಪತಿ.—ಇಡೀರಾಜ್ಯದಲ್ಲಿ ಇಂಥ ಪರಿಸ್ಥಿತಿ ಇದೆ ದಯವಿಟ್ಟು ಸಮಸ್ಯೆಯನ್ನು ತಿಳಿದು ಕೊಳ್ಳುವವರೆಗೆ ಮಾನ್ಯ ಮಂತ್ರಿಗಳ ತಡೆಯಾಜ್ಞೆಯನ್ನು ಕೊಡಲಿ. ಆದರಿಂದ ಏನೂ ತೊಂದರೆಯಾಗುವುದಿಲ್ಲ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಬಡವರ ಮನೆಗಳನ್ನು ಕೀಳತಕ್ಕ ಪರಿಸ್ಥಿತಿ ರಾಜ್ಯದಲ್ಲೆಲ್ಲಾ ಇದ್ದು ಈ ಕೆಲಸ ಅವ್ಯವಾಹತವಾಗಿ ನಡೆಯುತ್ತಿದೆ. ಅದನ್ನು ತಡೆಯುವುದಕ್ಕೆ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ. ಮಾನ್ಯ ಮಂತ್ರಿಗಳು ದಯವಿಟ್ಟು ಒಂದು ಹೇಳಿಕೆ ಕೊಟ್ಟು ಅದನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು .— ಬಡವರ ಎಲ್ಲಾ ಸಮಸ್ಯೆಗಳಿಗೂ ನಿಯಮಾವಳಿಯಲ್ಲಿ ಉತ್ತರ ಇದೆಯೆ ?

ಶ್ರೀ ಎಸ್.ಆರ್.ಬೊಮ್ಮಾಯಿ.—ಸರ್ಕಾರದ ಉದ್ದೇಶವನ್ನು ಸದಸ್ಯರು ದಯವಿಟ್ಟು ಗಮನದಲ್ಲಿ ಟ್ಟುಕೊಳ್ಳಬೇಕು. ಬಡವರು ಅತಿಕ್ರಮವಾಗಿ ಮನೆ ಕಟ್ಟಿಕೊಂಡಿದ್ದರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಇವತ್ತೇ ಬಿಲ್ ಮಂಡಿಸುತ್ತಿದ್ದೇವೆ. ಚರ್ಚೆಯಾಗಿ ಇದು ಪಾಸ್ ಆಗುತ್ತದೆ ಆರ್ಡಿನೆನ್ಸ್ ಪಾಸ್ ಮಾಡಿದ್ದು ಅದನ್ನು ಕಾನೂನು ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಕಾನಡೆಯವರು ಬಡವರನ್ನು ಮನೆಯಿಂದ ಹೊರಗೆ ಹಾಕುತ್ತಿದ್ದಾರೆ ಈ ಬಗ್ಗೆ ಅವರುನೋಟೀಸ್ ಕೊಟ್ಟಿದ್ದಾರೆ. ಅದಕ್ಕೆ ನಾವು ಉತ್ತರ ಕೊಡಬೇಕಾದರೆ ಅವರು ಎವರ ಕೊಡಬೇಕಾಗುತ್ತದೆ. ಅವರಿಗೆ ಮನೆ ಕಿಳುವ ಬಗ್ಗೆ ಯಾವಾಗ ನೋಟೀಸ್ ಬಂದಿದೆ ? ಎಷ್ಟು ದಿವಸ ಅವಧಿ ಕೊಟ್ಟಿದ್ದಾರೆ ? ಮನೆಯ ಸಾಮಾನು ಗಳನ್ನು ಹೊರಗೆ ಹಾಕಿ ಮನೆ ಕೀಳುವುದಕ್ಕೆ ನಿಗದಿ ಮಾಡಿರುವ ದಿವಸ ಯಾವುದು ? ಈ ವಿವರಗಳಿಲ್ಲಾ ತಮ್ಮಹತ್ತಿರ ಇದ್ದರೆ ಕೊಡಿ ಒಂದು ವೇಳೆ ಇವತ್ತೇ ಕೊನೆಯ ದಿವಸವಾಗಿದ್ದರೆ ಕೂಡಲೇ ಕ್ರಮ ತೆಗೆದು ಕೊಳ್ಳಬೆಕಾಗುತ್ತದೆ. ೨೪ ಗಂಟೆ ಅದಕ್ಕೆ ಅವಕಾಶವಿದೆಯೋ, ಒಂದುವಾರ ಇದೆಯೋ ಅಥವಾ ಒಂದು ತಿಂಗಳಿದೆಯೋ ಎಂಬುದನ್ನೆ ತಿಳಿದುಕೊಳ್ಳಬೇಕು. If it is so urgent, then it needs immediate considaration. Member who raises should give a notice. If it is very urgent, definitely it should be looked into immediately. If there is one week time for the vacation of the House, then Government cant take time. ಪ್ರಶ್ನೆ ಎತ್ತುವಾಗ ವಿವರಗಳನ್ನೂ ಇಟ್ಟುಕೊಂಡಿ ರಬೇಕಾಗುತ್ತದೆ.

SRI M. S. KRISHNAN .— I cannot understand why the Minister should insist upon the Member to produce the date, time etc.,

ಶ್ರೀ ಎಸ್. ಆರ್. ಬೊಮ್ಮಾಯಿ .— ನಾನು ನೋಟೀಸ್ ಪ್ರೊಡ್ಯೂಸ್ ಮಾಡಿ ಎಂದು ಹೇಳುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್ .— ಮನೆಗಳನ್ನು ಒಡೆದುಹಾಕುತ್ತಿದ್ದಾರೆ, ಪರಿಹಾರ ಕೊಡಿ ಎಂದು ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ .— ತಾವು ಹಿರಿಯ ಸದಸ್ಯರು, ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಕಾನಡೆಯವರು ಹೇಳಿರುವುದು ಮಹತ್ವದ ವಿಚಾರ. ಮನೆ ಕೂಡಲೇ ಖಾಲಿ ಮಾಡಬೇಕು

ಎಂದು ನೋಟೀಸ್ ಕೊಟ್ಟಿದ್ದರೆ ಸರ್ಕಾರ ಕೂಡಲೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ೧೫ ದಿವಸ, ೩೦ ದಿವಸ ಟೈಂ ಇದ್ದರೆ ಮಂತ್ರಿಗಳು ವಿವರ ಪಡೆದುಕೊಂಡು ನಾಳೆ ಉತ್ತರ ಹೇಳಬಹುದು. ಕೊನೆಯ ತಾರೀಖು ಯಾವುದು ಎಂಬುದನ್ನು ಅವರು ಹೇಳಲಿ.

ಶ್ರೀ ಎಂ. ಎಸ್. ಕೃಷ್ಣನ್ .— ಟೆಲಿಫೋನ್‌ನಲ್ಲಿ ಮಾತನಾಡಿ ವಿಷಯತಿಳಿದುಕೊಳ್ಳಬಹುದು.

ಶ್ರೀ ಪಂಪಾಪತಿ . — ನೋಟೀಸ್ ಕೊಡತಕ್ಕ ಪ್ರಶ್ನೆ ಎಲ್ಲಿ ಬರುತ್ತದೆ ? ಅನಧಿಕೃತವಾಗಿ ಕಟ್ಟಿರತಕ್ಕ ಕಟ್ಟಡಗಳನ್ನು ಕೆಲವು ಕಡೆ ಕಿತ್ತುಹಾಕುತ್ತಿದ್ದಾರೆ.

ಶ್ರೀ ಪಂಪಾಪತಿ.—ಕೆಲವು ಕಡೆ ಅನಧಿಕೃತ ಕಟ್ಟಡಗಳಿಗೆ ಕೆಡವಲು ನೋಟೀಸ್‌ನ್ನೇ ಕೊಡುವುದಿಲ್ಲ ಹಾಗೇ ಕೆಡವುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ. - ಮಾನ್ಯ ಹಿರಿಯ ಸದಸ್ಯರು ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಕೆಲವರು ಗೊರವರು ಹಾಗೂ ಮನೆ ಇಲ್ಲದವರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಆದರೆ ಕೆಲವರು ಶ್ರೀಮಂತರೇ, ಊರಿನಲ್ಲಿ ಮನೆ ಇರುವವರೇ, ಹದಿನೈದು ನೂರು ರೂಪಾಯಿಗಳ ಸಂಬಳ ಬರುತ್ತಿರುವವರೇ ಕಟ್ಟಡವನ್ನು ಕಟ್ಟಿಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲೇ ರೈಲ್ವೇ ಸರ್ವೀಸ್ ಎಂಪ್ಲಾಯೀಸೇ ಈ ರೀತಿ ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಅಂತಹವರಿಗೆ ನೀವು ನೋಟೀಸನ್ನೇ ಕೊಡುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಹರಿಜನಗಿರಿಜನರು ಹಾಗೂ ದೀನದಲಿತರ ಜೊತೆ ಶ್ರೀಮಂತರು ಹಾಗೂ ಸಾವಿರಾರು ರೂಪಾಯಿಗಳ ಸಂಬಳ ಬರುತ್ತಿರುವವರು ಸಹಾ ನಾಲ್ಕಾರು ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಇದರ ಜೊತೆಗೆ ಕೆಲವರು ಗುತ್ತೇದಾರರೂ ಆಗಿದ್ದಾರೆ. ಕೆಲವರು ಬಡವರಿಂದ ಬಾಡಿಗೆ ಕೂಡಾ ವಸೂಲು ಮಾಡುತ್ತಿದ್ದಾರೆ. ಬಡವರನ್ನು ಮನೆಯಿಂದ ಹೊರಗೆ ಹಾಕತಕ್ಕ ಪ್ರಶ್ನೆ ಈ ಸರ್ಕಾರಕ್ಕೆ ಇಲ್ಲ. ಈ ರೀತಿ ಬಡವರ ವಿಷಯದಲ್ಲಿ ಸರ್ಕಾರದ ಜಾಗವನ್ನು ಯಾರು ಶ್ರೀಮಂತರು ದುರುಪಯೋಗ ಮಾಡುತ್ತಿದ್ದಾರೆ. ಯಾರು ಬಾಡಿಗೆ ವಸೂಲು ಮಾಡುತ್ತಿದ್ದಾರೆ ಅವರ ಪ್ರಶ್ನೆ ಇಲ್ಲಿ ಇದೆ. ಅದಕ್ಕೆ ಈ ಕಾನೂನಿನಲ್ಲಿ ರೂಲ್ಸ್ ಇದೆ ಇದು ಅಧಿಕಾರಕ್ಕೆ ಬರುತ್ತಾ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಜಾಗವನ್ನು ರೆಗ್ಯುಲರೈಸ್ ಮಾಡಲು ಕಾನೂನು ತರುತ್ತೇವೆಂದು ಹೇಳುತ್ತಿದ್ದೀರಿ. ಆದ್ದರಿಂದ ಏನು ಗುಡಿಸಲುಗಳನ್ನು ಕೀಳುತ್ತಿದ್ದಾರೆ ಅದನ್ನು ನಿಲ್ಲಿಸಲು ಆಜ್ಞೆ ಮಾಡಿ. ಇದೇ ರೀತಿ ಮೋಬಾಗಿಲಿನಲ್ಲೂ ಸಹಾ ಕಿತ್ತು ಹಾಕಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಬಹಳ ಸರಳವಾದ ಒಂದು ವಿಚಾರವನ್ನು ನಿಯಮಾವಳಿಗಳ ಆಶ್ರಯ ಪಡೆದು ಇಷ್ಟೊಂದು ಸಂಕೀರ್ಣಗೊಳಿಸುವುದಕ್ಕೆ ಮತ್ತು ಇಡೀ ಚರ್ಚೆಯ ವಿಚಾರವನ್ನು ಹಾದಿ ತಪ್ಪಿಸುವುದಕ್ಕೆ ಏಕೆ ಇಷ್ಟು ಪ್ರಯೋಗಗಳಾಗುತ್ತಿವೆ ಎಂಬುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಸರಳ ವಿಚಾರ ಏನೆಂದರೆ, ರವಿನ್ಯೂ ಜಾಗದಲ್ಲಿ ಬಡವರ ಮನೆ ಕಟ್ಟಿರುತ್ತಾರೆ. ಶಿರಸಿ–ಸಿದ್ದಾಪುರ ಭಾಗದಲ್ಲಿ ಬಡವರು ಹೇಗೆ ಮನೆಗಳನ್ನು ಕಟ್ಟಿರುತ್ತಾರೆ ಎಂಬುದು ನನಗೆ ಗೊತ್ತು. ಶಿರಸಿ ಪುರಸಭೆ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ರವಿನ್ಯೂ ಜಾಗವನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡಿದೆ. ಇದನ್ನು ತೆಗೆದು ಕೊಂಡ ಮೇಲೆ ಈ ಜಾಗವನ್ನು ರೆಗ್ಯುಲರೈಸ್ ಮಾಡಬೇಕೋ ಅಥವಾ ಬಿಡಬೇಕೋ ಎನ್ನುವ ವಿಚಾರವನ್ನು ಪರಿಶೀಲನೆ ಮಾಡಬೇಕು. ಇದರಲ್ಲಿ ನಿಜವಾದ ಅದ್ಯತೆ ಯಾರಿಗೆ ಕೊಡಬೇಕು, ಯಾರಿಗೆ ನೆರಳು ಇಲ್ಲ ಅಂತಹವರಿಗೆ ಆ ಜಾಗವನ್ನು ಖಾಯಂ ಮಾಡುವುದಕ್ಕೆ ಆದ್ಯತೆ ಕೊಡುವುದಕ್ಕೆ ವಿಧೇಯಕ ಬರುತ್ತಾ ಇದೆ. ಅದು ಚರ್ಚೆಗೆ ಬಂದಾಗ ಆ ವಿಚಾರವನ್ನು ನಾವು ಮಾತನಾಡುತ್ತೇವೆ. ಆದರೆ ಈಗ ಒಂದು ತಿಂಗಳ ಹಿಂದ ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಚುನಾವಣೆಯ ಗಲಾಟೆಯಲ್ಲಿ ನೋಟೀಸ್ ಪೀರಿಯಡ್ ಮುಗಿಯುತ್ತಾ ಬಂದಿದೆ. ಸರ್ಕಾರ ಮನಸ್ಸು ಮಾಡಿದರೆ ಈ ಬಗ್ಗೆ ೧ ಗಂಟೆಯಲ್ಲಿ ವಿವರವನ್ನು ತರಿಸಿಕೊಳ್ಳಬಹುದು. ಅಲ್ಲಿ ಬಡವರ ಬಟ್ಟೆ ಬರೆಗಳನ್ನು, ಮಡಿಕೆ ಕುಡಿಕೆಗಳನ್ನು ಏಕ್‌ದಮ್ ತೆಗೆಯುತ್ತಾರೆಂಬುದು ತಮಗೂ ಗೊತ್ತು. ಇದು ಆಗಬಾರದು. ಸರ್ಕಾರ ನಿಂತ ನಿಲುವಿನಲ್ಲೇ ಎಲ್ಲವನ್ನೂ ಮಾಡುವುದಕ್ಕಾಗುತ್ತದೆಂದು ನಾವು ಹೇಳುವುದಿಲ್ಲ. ಆಕಸ್ಮಾತ್ ಶ್ರೀಮಂತರೇ ಅಲ್ಲಿ ಒತ್ತುವರಿ ಮಾಡಿದ್ದರೆ ೪ ದಿವಸಗಳಲ್ಲಿ ಏನು ಆಕಾಶ ಕಳಚಿ ಬೀಳುವುದಿಲ್ಲ. ಈ ದಿನ ಅಲ್ಲಿ ಅವರ ಮನೆಗಳನ್ನು ಕೆಡವದಂತೆ ಆಜ್ಞೆಯನ್ನು ಮಾಡಿ ಆ ನಂತರ

ಯಾರು ಶ್ರೀಮಂತರು ಬಡವರು ಇದ್ದಾರೆಂದು ತಿಳಿದು ಇಲ್ಲಿ ಬಂದು ತಾವು ಉತ್ತರ ಕೊಡಬಹುದು. ಆದರೆ ಇಲ್ಲಿ ಈ ಬಗ್ಗೆ ನಿಯಮಾವಳಿ ಹಾಗೂ ಮತ್ತೊಂದು ವಿಚಾರ ಏಕೆ ? ಈ ಪಂಚಾಯಿತಿಯಲ್ಲಿ ನಿಜವಾಗಿ ಜನರ ಸಮಸ್ಯೆಯನ್ನು ಅರ್ಥ ಪೂರ್ಣವಾಗಿ, ಯೋಗ್ಯವಾಗಿ ಚರ್ಚೆ ಮಾಡುವುದಕ್ಕೆ ನಿಯಮಾವಳಿ ಇರಬೇಕೇ ಹೊರತು ನಿಯಮಾವಳಿಗೋಸ್ಕರ ನಾವು ಇಲ್ಲ. ನಿಯಮಾಳಿಯ ದುರುಪಯೋಗ ಮಾಡಿಕೊಂಡು ಇಲ್ಲದೇ ಇರುವ ಸಮಸ್ಯೆಯನ್ನು ಹುಟ್ಟಿಸಿದರೆ ಅದು ಸರಿಹೋಗುವುದಿಲ್ಲ. ಇದು ಮಾನವೀಯ ಸಮಸ್ಯೆ ಇದೆ. ಇದು ಬಡವರ ಗುಡಿಸಲಿನ ಪ್ರಶ್ನೆಯಾಗಿದೆ. ಇಲ್ಲಿ ನಿಯಮಾವಳಿಯನ್ನು ಹೇಳುವುದು ಸರಿಯಲ್ಲ ಬಡವರ ವಿರುದ್ಧದ ಯಾವುದೇ ರೂಲ್ಸ್‌ಗೂ ಇಲ್ಲಿ ಬೆಲೆ ಇಲ್ಲ. ಆದುದರಿಂದ ಅಧಿಕಾರಿಗಳು ಸರಳವಾಗಿ ಮನೆ ಕೆಡುವುವುದಕ್ಕೆ ಅವಕಾಶವನ್ನು ಕೊಡಬೇಡಿ. ಬೇಕಾದರೆ ಇನ್ನೂ ೧೫ ದಿವಸದಲ್ಲಿ ವಿವರವನ್ನು ತಿಳಿದುಕೊಂಡು ಯಾವುದನ್ನು ರೆಗ್ಯುಲರೈಸ್ ಮಾಡಬೇಕು ಅಥವಾ ಬೇಡ ಎನ್ನುವ ಬಗ್ಗೆ ತಿಳಿದುಕೊಳ್ಳ ಬಹುದು ಇಲ್ಲಿ ಬೇರೆ ವಿವರಗಳು ಇಲ್ಲದಿದ್ದಾಗ ಮಾನ್ಯ ಸದಸ್ಯರು ಹೇಳಿದ ಮಾತನ್ನು ಸತ್ಯಾಂಶ ಎಂದು ನಂಬಬೇಕು. ಇಲ್ಲದಿದ್ದರೆ ಅವರ ಸದಸ್ಯತ್ವಕ್ಕೆ ಬೆಲೆ ಇರುವುದಿಲ್ಲ. ಬಡವರ ಗುಡಿಸಲುಗಳಿಗೆ ಅಪಾಯವಿರುವುದರಿಂದ, ವಿವರ ತರಿಸಿ ಉತ್ತರ ಕೊಡುತ್ತೇವೆಂದು ಹೇಳಿದರೆ ಸಾಕು. ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ತೆಗೆದು ಕೊಳ್ಳುವುದು ಬೇಡ. ಈ ಬಗ್ಗೆ ನಿಯಮಾವಳಿಗಳನ್ನು ಏಕೆ ತರುತ್ತಿದ್ದೀರೋ ನನಗೆ ಗೊತ್ತಿಲ್ಲ ಇಲ್ಲಿ ನಿಯಮಾವಳಿಗಳನ್ನು ಪ್ರಯೋಗ ಮಾಡದೇ ಬಡವರಿಗೆ ಅಗತ್ಯ ರಕ್ಷಣೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಶ್ರೀನಿವಾಸ್ ಅವರು ನಿಯಮಾವಳಿಯ ಅಗತ್ಯವಿಲ್ಲ, ಕೆಲಸ ಆಗಬೇಕಾಗಿರುವುದು ನಿಜ ಎಂದು ಹೇಳಿದ್ದಾರೆ. ಇವರು ಏಕೆ ಇಷ್ಟು ಅವಸರ ಪಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಅವರು ನನಗೇನೋ ಹೊಸಬರಲ್ಲ. ಅವರೂ ನಾವೂ ಒಂದೇ ಕಡೆಯಿಂದ ವಾದ ಮಾಡಿದ್ದು ಉಂಟು.

ಶ್ರೀ ಆರ್. ಎನ್. ನಾಯಕ್.—ಇವರು ಈ ರೀತಿ ಹೇಳುವುದನ್ನು ನೋಡಿದರೆ ನನಗೇನೋ ಸಂಶಯ ಬರುತ್ತಾ ಇದೆ.

ಶ್ರೀ ಕೆ ಎಚ್. ಪಾಟೀಲ್.—ಮಾನ್ಯ ಲಕ್ಷ್ಮೀಸಾಗರ್ ಅವರೇನೂ ಈ ಸಭೆಗೆ ಹೊಸಬರಲ್ಲ. ಹಿಂದೆ ಈ ಸಭೆಯಲ್ಲಿ ಅವರು ಮಾಡಿದ ಭಾಷಣವನ್ನು ಅವರೇ ನೋಡಿದರೆ ಈ ಸಮಸ್ಯೆಗೆ ಉತ್ತರ ಅವರಿಗೇ ಸಿಗುತ್ತದೆ.

ಶ್ರೀ ಎಂ. ರಘುಪತಿ.—ಇಬ್ಬರ ಭಾಷಣಗಳನ್ನು ಒಟ್ಟಿಗೇ ಇಟ್ಟುಕೊಂಡು ನೋಡಿದರೆ ಒಳ್ಳೆಯದು.

ಶ್ರೀ ಎಂ ರಾಮಪ್ಪ.—ಮಾನ್ಯ ರಘುಪತಿ ಮತ್ತು ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಮನೆ ಮಠಗಳ ಬಗ್ಗೆ ಏನು ಏನು ಗೊತ್ತು ? ಇಬ್ಬರೂ ಅವಿವಾಹಿತರು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರಾದ ಕಾನಡೆಯವರು ಪ್ರಸ್ತಾಪ ಮಾಡಿರತಕ್ಕ ವಿಷಯದ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಅವರ ಪ್ರಕಾರ ಬಡವರಿಗೆ ಏನಾದರೂ ಅನ್ಯಾಯವಾಗುತ್ತಿದ್ದರೆ ಅದನ್ನು ಕುಳಿತು ನೋಡತಕ್ಕ ಸರ್ಕಾರ ಇದಲ್ಲ. ಆದ್ದುದರಿಂದ ತಕ್ಷಣ ಈ ಬಗ್ಗೆ ವಿಚಾರ ಮಾಡಿ ನಾಳೆಯೇ ಉತ್ತರವನ್ನು ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಗಳೇ, ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದನ್ನು ನಾನು ಮರೆತಿದ್ದೆ. ನಾನು ೧೯೮೦ರಲ್ಲಿ ಕಂದಾಯ ಮಂತ್ರಿಯಾಗಿದ್ದಾಗ ಅಲ್ಲಿನ ಪ್ರದೇಶವನ್ನು ಪರಿಶೀಲಿಸಿದ್ದೇನೆ. ಆ ಜಾಗದಲ್ಲಿ ಅಡಿಕೆ ಮಂಡಿ ಇದೆ. ಹಾಗೂ ಅಲ್ಲಿ ಕೂಲಿ ಮಾಡುವವರು ತರಕಾರಿ ಮಾರುವವರು, ಹಮಾಲಿ ಮಾಡುವವರು, ಹಾಗೂ ಸಣ್ಣ ಪುಟ್ಟ ವ್ಯಾಪಾರ ಮಾಡುವವರು ಅಲ್ಲಿ ಇದ್ದಾರೆ. ಅಲ್ಲಿ ಹೆಚ್ಚಾಗಿ ಅಲ್ಪ ಸಂಖ್ಯಾತರು, ಹಿಂದುಳಿದವರು ಹರಿಜನಗಿರಿಜನರು ದೀನದಲಿತರು ಇದ್ದಾರೆ. ತಾವು ಮಾನವೀಯ ದೃಷ್ಟಿಯಿಂದ ಈ ಬಗ್ಗೆ ಯೋಚನೆ ಮಾಡಬೇಕೆಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ —ಒಬ್ಬ ವ್ಯಕ್ತಿ ಅಧಿಕಾರದಲ್ಲಿದ್ದಾಗ ಒಳ್ಳೆಯದಕ್ಕಾಗಿ ಯಾವ ರೀತಿ ಅಧಿಕಾರವನ್ನು ಚಲಾವಣೆ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕು. ೧೯೮೦ರಲ್ಲಿ ನಾನು ಕಂದಾಯ ಸಚಿವನಾಗಿದ್ದೆ. ಆಗ ನಾನೂ ಕೂಡ ಅಡಳಿತವನ್ನು ಚೆನ್ನಾಗಿ ಮಾಡಲಿಲ್ಲ ಎಂದು

ನಿಮ್ಮ ಮನಸ್ಸಿಗೆ ಎನಿಸಿದ್ದರೆ ಅದನ್ನೂ ತಾವು ಹೇಳಬಹುದು. ಈಗ ಇಲ್ಲಿ ಬಂದಿರುವ ಪ್ರಶ್ನೆ ಎಂದರೆ ಅಡಿಕೆ ವಂಡಿಯಲ್ಲಿ ಕೆಲಸಮಾಡುವವರು, ಹಮಾಲಿ ಕೆಲಸ ಮಾಡುವವರು, ಚಿಕ್ಕಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿರುವವರು, ಹರಿಜನವರ್ಗಕ್ಕೆ ಸೇರಿದವರು, ಹಿಂದುಳಿದ ವರ್ಗಕ್ಕೆ ಸೇರಿದ ಜನ ಇವರು, ಇವರುಕಟ್ಟಿಕೊಂಡಿರತಕ್ಕ ಮನೆಗಳನ್ನು ಕೆಡವಿಸುವುದಕ್ಕೆ ತಾವು ಹೊರಟಿದ್ದೀರಿ.ನಾನು ಆಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಮನೆಗಳನ್ನು ಕಟ್ಟಿಕೊಂಡಿರತಕ್ಕ ಜಾಗ ಮುನಿಸಿಪಾಲಿಟಿಗೆ ಸೇರದಿದ್ದರೂ ನೇರವಾಗಿ ನಿಮ್ಮ ಕಂದಾಯ ಇಲಾಖೆಗೇ ಅದು ಬರತ್ತದೆ. ಹಿಂದೆ ಒಂದು ಸಾರಿ ಇಂಥಾದ್ದೇ ಒಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಸ್ಥಳಪರಿಶೀಲನೆ ಮಾಡಿದಾಗ ಮಾನವೀಯ ದೃಷ್ಟಿಯಿಂದ ಉತ್ತಮ ತೀರ್ಮಾನವನ್ನು ನಾನು ತೆಗೆದುಕೊಂಡಿದ್ದೆ. ಸರ್ಕಾರ ಎಷ್ಟೋ ತೀರ್ಮಾನಗಳನ್ನು ಮಾಡುತ್ತದೆ. ಅನೇಕ ಸಿಕ್ ಇಂಡಸ್ಟ್ರೀಸಗೆ ಲಕ್ಷಾಂತರ ರೂಪಾಯಿಗಳ, ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಮುತ್ತ ಪ್ರಾರಂಭಿಸುವಂತೆ ಮಾಡಬಹುದು, ಆದರೆ ಬಡವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಾಲ ಕೊಡುತ್ತಿಲ್ಲ. ನಾನು ಹಿಂದೆ ಕಂದಾಯ ಮಂತ್ರಿಯಾಗಿದ್ದಾಗ ಏನು ಮಾಡಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.ಬಡವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪುಕ್ಕಟೆಯಾಗಿ ಜಾಗ ಕೊಡುವುದಕ್ಕೆ ಕಾನೂನು ತೊಡಕು ಏನಿದೆ ? ಅವರಿಗೆ ಕಳೆದ ೨೦–೩೦ ವರ್ಷಗಳಿಂದಲೂ ಏನೂ ಗತಿಯಿಲ್ಲ. ಆದ್ದರಿಂದ ಅವರಿಗೆ ಪುಂಫತ್ತಾಗಿ ಜಾಗವನ್ನು ಕೊಡಿ ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಯವರನ್ನು ಕೇಳಿದಾಗ ಆ ರೀತಿ ಪುಕ್ಕಟೆಯಾಗಿ ಕೊಡುವುದಕ್ಕೆ ಬರುವುದಿಲ್ಲವೆಂದು ಅವರು ಹೇಳಿದಮೇಲೆ ಒಂದು ಗುಂಟೆಗೆ ೧೦ ರೂಪಾಯಿಗಳಂತೆ ಕೊಟ್ಟು ಕಟ್ಟಿಕೊಳ್ಳಿ ಎಂದು ನಾನೇ ಸ್ಥಳದಲ್ಲಿಯೇ ಅವರಿಗೆ ಆಜ್ಞೆ ಮಾಡಿದ್ದೇನೆ. ಏಕೆಂದರೆ ಅಲ್ಲಿ ವಾಸಮಾಡತಕ್ಕ ಜನರು ಬಹಳ ಬಡವರು. ಅವರಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ ತಮಗೂ ಗೊತ್ತಿದೆ. ದಿನಬೆಳಗಾದರೆ ಹೊಟ್ಟೆಪಾಡಿಗಾಗಿ ಕೂಲಿಗೆ ಹೋಗತಕ್ಕ ಜನರು ಇರುವ ಜಾಗದಲ್ಲಿ ನಾನು ಹೋಗಿ ಸ್ಥಳಪರಿಶೀಲನೆ ಮಾಡಿ ನೋಡಿದ್ದೇನೆ. ಅಂಥ ಜನರಿಗೆ ತೊಂದರೆ ಕೊಡುವುದಕ್ಕೆ ಹೋಗಬೇಡಿ ೪–೫ ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರು ಯಾರಾದರೂ ಈ ರೀತಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅವುಗಳನ್ನು ಕೆಡವಿ ಉರುಳಿಸಿ. ನನಗೆ ತಿಳಿದಿರುವಂತೆ ದೊಡ್ಡ ದೊಡ್ಡ ಕಾಫಿ ಪ್ಲಾಂಟರ್ಸ್ ನೂರಾರು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದನ್ನು ನಿಮ್ಮ ಕ್ಯಾಬಿನೆಟ್‌ರಲ್ಲಿ ರೆಗ್ಯುಲರೈಸ್ ಮಾಡಿದ್ದೀರಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಆ ವಿಚಾರ ಪ್ರಸ್ತಾಪ ಮಾಡುವುದು ಬೇಡ. ಇದಕ್ಕೆ ಸಂಬಂಧಪಟ್ಟ ಬಿಲ್ ಬಂದಾಗ ಮಾತನಾಡಿ...

* * * *

(ಗೊಂದಲ)

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಎನ್‌ಕ್ರೋಚ್‌ಮೆಂಟ್, ಬಗರ್ ಹುಕುಂ ಇಂಥಾದ್ದನ್ನೆಲ್ಲಾ ಮಾಡಿಸಿದವರು ನೀವೇ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಮೇಲೆ ಆಪಾದನೆ ಮಾಡುತ್ತಿರುವಂತೆ ಕಾಣುತ್ತಿದೆ. ನಾನು ಮೊದಲೇ ಹೇಳಿದ್ದೇನೆ. ಅವರು ಮಾಡುತ್ತಿರುವ ಆಪಾದನೆಯನ್ನು ಅಷ್ಟೊಂದು ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಯಾರೇ ಆಗಲಿ ಇನ್ನೊಬ್ಬ ವ್ಯಕ್ತಿಯ ಮೇಲೆ ಆಪಾದನೆ ಮಾಡಬೇಕಾದರೆ ಆವರು ಅದರ ಸಂಪೂರ್ಣ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಈಗ ಮಾನ್ಯ ಸದಸ್ಯರು ಏನು ಆಪಾದನೆಯನ್ನು ಮಾಡಿದ್ದಾರೆ ಅದನ್ನು ಸಾಬೀತು ಮಾಡಬೇಕು, ಇಲ್ಲವೇ ಅದನ್ನು ವಾಪಸು ತೆಗೆದುಕೊಳ್ಳಬೇಕು. ಅವರು ಮಾಡಿರುವ ಆಪಾದನೆಯನ್ನು ವಾಪಸು ತೆಗೆದುಕೊಳ್ಳದೇ ಹೋದರೆ ಈಗ ಸದನದ ಮುಂದಿರುವ ವಿಷಯವನ್ನು ಬಿಟ್ಟು ಅವರು ಮಾಡಿರತಕ್ಕ ಆಪಾದನೆಯ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಾನು ತಮಗೆ ಒಂದು ಮಾತನ್ನು ಹೇಳುವುದಾದರೆ ಹಿಂದೆ ನಾನು ಕಂದಾಯ ಮಂತ್ರಿಯಾಗಿದ್ದಾಗ ಕಾಫಿ ಪ್ಲಾಂಟರ್ಸ್ ಒತ್ತುವರಿ ಮಾಡಿಕೊಂಡಿದ್ದ ಜಾಗವನ್ನು ತೆರವು ಮಾಡಿಸುವುದಕ್ಕೆ ಸಂಬಂಧಪಟ್ಟಂತೆ ಚಿಕ್ಕ–ಮಗಳೂರು ಜಿಲ್ಲಾಧಿಕಾರಿಯವರಿಂದ ಫೈಲನ್ನು ತರಿಸಿಕೊಂಡು ತಕ್ಷಣವೇ ಆಜ್ಞೆ ಮಾಡಿದ್ದೇನೆ. ನಾನು ಹಣವನ್ನು

* As orderd by the Cheir matter expunged

ಯಾವತ್ತೂ ಕಲೆಕ್ಟ್ ಮಾಡಿದವನಲ್ಲ. ಆದರೆ ಮಾನ್ಯ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ ಅವರು ಹೇಳಿರುವುದು ರೆಕಾರ್ಡ್‌ಗೆ ಹೋಗಿದೆ.

(ಗೊಂದಲ)

ಅಧ್ಯಕ್ಷರು.—ರೆಕಾರ್ಡ್‌ನ್ನು ನೋಡಿ ತೆಗೆದುಹಾಕುವಂಥ ಪದವನ್ನು ಅವರು ಉಪಯೋಗಿಸಿದ್ದರೆ ತೆಗೆದುಹಾಕಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ,ಅವರು ಹಗುರವಾಗಿ ಆಪಾದನೆಯನ್ನು ಮಾಡಿ ಆಹ್ಲಾದವನ್ನು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ,

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಸದನದ ವಿಧಿ ನಿಯಮಾವಳಿ ಪುಸ್ತಕದ ಕೆಳಗೆ ಮಾನ್ಯ ಸದಸ್ಯರಾದ ಕಾನಡೆಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ನಾಳೆ ಉತ್ತರವನ್ನು ಕೊಡುವುದಾಗಿ ಮಾನ್ಯ ಜೆ ಹೆಚ್. ಪಟೇಲ್‌ರವರು ಹೇಳಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ ಈ ವಿಷಯವನ್ನು ಇಲ್ಲಿಗೆ ಬಿಟ್ಟು ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆಗೆ ನಾಳೆ ಉತ್ತರ ಕೊಡುತ್ತೇವೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ವಿಷಯವನ್ನು ಇಷ್ಟಕ್ಕೇ ನಾನು ಬಿಡುವುದಕ್ಕಾಗುವುದಿಲ್ಲ ಮತ್ತು ನಾಳೆ ಈ ವಿಷಯಕ್ಕೆ ಉತ್ತರ ಕೊಡುತ್ತೇವೆಂದು ಮಾನ್ಯ ಪಟೇಲ್‌ರವರು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಇದರ ಮಧ್ಯೆ ಇವತ್ತೇ ಅಲ್ಲಿರತಕ್ಕ ಆ ಬಡವರು ಮನೆಗಳನ್ನು ಉರುಳಿಸಿದರೆ ಅದಕ್ಕೆ ಯಾರು ಜವಾಬ್ದಾರರು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ೨೪ ಗಂಟೆಯೊಳಗೆ ಅವರ ಮನೆಗಳನ್ನು ಯಾರೂ ಕೂಡ ಉರುಳಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ —ಆಗಬಹುದು. ಆದರೆ ಮಾನ್ಯ ಸದಸ್ಯರೊಬ್ಬರು ನನ್ನ ಬಗ್ಗೆ ಮಾಡಿರುವ ಆಪಾದನೆ ರೆಕಾರ್ಡ್‌ನಲ್ಲಿ ಹೋಗಿದೆ, ಅದನ್ನು ಏನು ಮಾಡುತ್ತೀರಿ ?

ಅಧ್ಯಕ್ಷರು.—ನಾನು ರೆಕಾರ್ಡ್ ನೋಡಿ ಅಂಥಾದ್ದು ಏನಾದರೂ ಇದ್ದರೆ ತೆಗೆಸಿಹಾಕುತ್ತೇನೆ.

೪) ನೆರಿಯ ಯೋಜನೆಯಿಂದ ಕಾಡನ್ನು ಕಡಿಯುವುದರ ಮೂಲಕ ಜನರಿಗೆ ತೊಂದರೆ ಉಂಟಾದುದರಿಂದ, ಅದನ್ನು ಕೈ ಬಿಡುವ ಬಗ್ಗೆ

ಶ್ರೀ ವಸಂತಬಂಗೇರ(ಬೆಳ್ತಂಗಡಿ)–ಮಾನ್ಯ ಅಧ್ಯಕ್ಷರೆ,ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಳ್ಳಲಿರುವ ನೆರಿಯ ಯೋಜನೆಯಿಂದ ಆ ಕ್ಷೇತ್ರದ ಜನರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಅಲ್ಲದೆ ಸಾವಿರಾರು ಎಕರೆ ಕಾಡನ್ನೂ ಕೂಡ ಕಡಿಯಬೇಕಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಕೈಬಿಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ ಅದೇರೀತಿ ಆ ಕ್ಷೇತ್ರದ ಜನರೂ ಕೂಡ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಸ್ಪಷ್ಟ ಉತ್ತರವನ್ನು ಹೇಳಬೇಕು. ಏಕೆಂದರೆ ಸಾವಿರಾರು ಎಕರೆ ಕಾಡನ್ನು ಕಡಿಯಬೇಕಾಗಿರುವುದರಿಂದ ಪ್ರಕೃತ ಮಂಗನ ಕಾಯಿಲೆ ಬೆಳ್ತಂಗಡಿಯಲ್ಲಿ ಪ್ರಾರಂಭವಾಗಿ ಅದು ಮತ್ತಷ್ಟು ಉಲ್ಬಣವಾಗಿ ಸಾವಿರಾರು ಬಡವರ ಪ್ರಾಣವನ್ನು ಬಲಿ ತೆಗೆದುಕೊಂಡೀತು. ಆ ಕಾರಣದಿಂದ ನೆರಿಯ ಯೋಜನೆಯನ್ನು ಕೈ ಬಿಟ್ಟು ಬಡವರ ಪ್ರಾಣ ಉಳಿಸಬೇಕಾಗಿ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು, ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಡವರ ಪ್ರಾಣ ಉಳಿಯಬೇಕೆ ?' ಅಥವಾ ನೆರಿಯ ಯೋಜನೆ ಬೇಕೆ'' ಎಂದು ತಮ್ಮ ಪ್ರಶ್ನೆಯಲ್ಲಿ ಕೇಳಿದ್ದಾರೆ. ಇದನ್ನು ನಾವು ೭ನೇ ಯೋಜನೆಯಲ್ಲಿ ಹಾಕಿದ್ದೇವೆ. ಈಗಲೇ ಇದರ ಬಗ್ಗೆ ಏನನ್ನೂ ನಾವು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲು ಪ್ರಾಜೆಕ್ಟ್ ಪ್ಲಾನ್ ತಯಾರಾಗಬೇಕು. ಅನಂತರ ಅದಕ್ಕೆ ಫೀಸಿಬಲಿಟಿ ಇದೆಯೆ?